**ತ**ನ್ನಿಂದ ಹೊರಗೆ ದೇವರನ್ನು ಹುಡುಕುವಂತೆ ಮಾಡಿಸುವುದು ಅಜ್ಞಾನ. ದೇವರು ತನ್ನಲ್ಲಿರುವನು ಎಂದು ಯಾವಾಗ ಗೊತ್ತಾಗುವುದೋ, ಅದೇ ಜ್ಞಾನ.

**ದೇ**ವರು ಮನುಷ್ಯನಲ್ಲಿ ಹೇಗೆ ಇರುವನು ಗೊತ್ತಿದೆಯೇ? ಶ್ರೀಮಂತರ ಮನೆಯ ಹೆಂಗಸರು ಪರದೆಯ ಹಿಂದೆ ಇರುವಂತೆ ಇರುವನು. ಅವರು ಎಲ್ಲರನ್ನೂ ನೋಡಬಲ್ಲರು. ಆದರೆ ಯಾರೂ ಅವರನ್ನು ನೋಡಲಾರರು.

**ಮಾ**ಯೆಯ ಸ್ವಭಾವವೇನು ಗೊತ್ತೆ? ಕೊಳದ ನೀರಿನ ಮೇಲೆ ತೇಲುವ ಪಾಚಿಯಂತೆ. ನೀವು ಅದನ್ನು ಆಚೆಗೆ ತಳ್ಳಬಹುದು. ಆದರೆ ಅದು ನೀರಿನ ಮೇಲೆ ಪುನಃ ಬಂದು ಆವರಿಸುವುದು. ಅದರಂತೆಯೇ ನೀವು ಎಲ್ಲಿಯವರೆಗೆ ನಿಮ್ಮಲ್ಲಿ ವಿಚಾರ ಮಾಡುತ್ತೀರೋ ಅಲ್ಲಿಯವರೆಗೆ ಎಲ್ಲಾ ಚೆನ್ನಾಗಿರುವುದು. ಆದರೆ ಇದಾದ ತಕ್ಷಣವೇ ಪ್ರಾಪಂಚಿಕ ಬಯಕೆಗಳು ನಿಮ್ಮ ಮೇಲೆ ಮಾಯೆಯ ತೆರೆಯನ್ನು ಬೀಸುವುವು.

ಒಬ್ಬನನ್ನು ಪಿಶಾಚಿಯು ಮೆಟ್ಟಿಕೊಂಡಿದ್ದರೆ ಹಾಗೆ ತನ್ನನ್ನು ಅದು ಮೆಟ್ಟಿಕೊಂಡಿದೆ ಎಂದು ಅವನಿಗೆ ಗೊತ್ತಾದರೆ, ತಕ್ಷಣವೇ ಅದು ಬಿಟ್ಟುಹೋಗುವುದು. ಇದರಂತೆಯೇ ಮಾಯೆಗೆ ಒಳಪಟ್ಟ ಜೀವರು ತಾವು ಭ್ರಾಂತರಾಗಿರುವೆವು ಎಂದು ತಿಳಿದಾಗ ಮಾಯೆಯಿಂದ ಪಾರಾಗುವರು.

**ಸೂ**ರ್ಯ ಅಥವಾ ಚಂದ್ರ, ಕದಡಿರುವ ನೀರಿನಲ್ಲಿ ಪ್ರತಿಬಿಂಬಿಸುವುದಿಲ್ಲ. ಅದರಂತೆಯೇ ಮಾಯೆಯನ್ನು ಸಂಪೂರ್ಣವಾಗಿ ಹೋಗಲಾಡಿಸುವ ತನಕ. ಅಂದರೆ ನಾನು, ನನ್ನದು ಎಂಬ ಭಾವ ಹೋಗದೆ ಇರುವ ತನಕ ಈಶ್ವರನನ್ನು ನಾವು ಕಾಣಲಾರೆವು.

ಎಲ್ಲಿಯವರೆಗೆ ಒಬ್ಬನು ಶಾಸ್ತ್ರಗಳಲ್ಲಿರುವುದನ್ನು ಚರ್ಚಿಸಬೇಕು? ದೇವರನ್ನು ಕಾಣುವ ತನಕ. ಹೂವಿನ ಮೇಲೆ ಕುಳಿತುಕೊಳ್ಳುವ ತನಕ ಜೇನು ಹುಳು ಶಬ್ದ ಮಾಡುವುದು. ಮಕರಂದವನ್ನು ಹೀರಲು ಮೊದಲು ಮಾಡುತ್ತಲೇ ಅದರ ಶಬ್ದವೆಲ್ಲ ನಿಲ್ಲುವುದು.

*ಶ್ರೀರಾಮಕೃಷ್ಣ*



**"ದಾರಿದ್ರ್ಯದಹನ ಸ್ತೋತ್ರ" ದಿಂದ**

ವಿಶ್ವೇಶ್ವರಾಯ ನರಕಾರ್ಣವತಾರಣಾಯ
ಕರ್ಣಾಮೃತಾಯ ಶಶಿಶೇಖರಭೂಷಣಾಯ ।
ಕರ್ಪೂರಕುಂದಧವಲಾಯ ಜಟಾಧರಾಯ
ದಾರಿದ್ರ್ಯದುಃಖದಹನಾಯ ನಮಃ ಶಿವಾಯ ॥ ೧ ॥

ವಿಶ್ವೇಶ್ವರನೂ, ನರಕವೆಂಬ ಸಾಗರದಿಂದ ಪಾರುಮಾಡುವವನೂ ಕಿವಿಗೆ ಅಮೃತಸ್ವರೂಪನೂ, ಚಂದ್ರಶೇಖರಭೂಷಣನೂ, ಕರ್ಪೂರ ಮತ್ತು ಕುಂದ ಪುಷ್ಪ ಇವುಗಳಂತೆ ಶುಭ್ರವಾಗಿರುವವನೂ, ಜಟಾಧಾರಿಯೂ, ದಾರಿದ್ರ್ಯ ದುಃಖವನ್ನು ದಹನಮಾಡುವವನೂ ಆದ ಶಿವನಿಗೆ ನಮಸ್ಕಾರ.

ಭಕ್ತಿಪ್ರಿಯಾಯ ಭವರೋಗಭಯಾಪಹಾಯ
ಉಗ್ರಾಯ ದುರ್ಗಭವಸಾಗರತಾರಣಾಯ ।
ಜ್ಯೋತಿರ್ಮಯಾಯ ಪುನರುದ್ಭವವಾರಣಾಯ
ದಾರಿದ್ರ್ಯದುಃಖದಹನಾಯ ನಮಃ ಶಿವಾಯ ॥ ೨ ॥

ಭಕ್ತಿಪ್ರಿಯನೂ, ಭವರೋಗದ ಭಯವನ್ನು ನಾಶಮಾಡುವವನೂ, ಉಗ್ರಸ್ವರೂಪನೂ, ದುರ್ಗಮವಾದ ಭವಸಾಗರದಿಂದ ಪಾರುಮಾಡುವವನೂ, ಜ್ಯೋತಿರ್ಮಯನೂ, ಪುನರ್ಜನ್ಮವನ್ನು ನಿವಾರಿಸುವವನೂ, ದಾರಿದ್ರ್ಯ ದುಃಖವನ್ನು ದಹನಮಾಡುವವನೂ ಆದ ಶಿವನಿಗೆ ನಮಸ್ಕಾರ.

ಚರ್ಮಾಂಬರಾಯ ಶವಭಸ್ಮ ವಿಲೇಪನಾಯ
ಭಾಲೇಕ್ಷಣಾಯ ಫಣಿಕುಂಡಲಮಂಡಿತಾಯ ।
ಮಂಜೀರಪಾದಯುಗಲಾಯ ಜಟಾಧರಾಯ
ದಾರಿದ್ರ್ಯದುಃಖದಹನಾಯ ನಮಃ ಶಿವಾಯ ॥ ೩ ॥

ಚರ್ಮಾಂಬರವನ್ನು ಧರಿಸಿದವನೂ, ಶವಭಸ್ಮವನ್ನು ಲೇಪಿಸಿಕೊಂಡಿರುವವನೂ, ಹಣೆಗಣ್ಣಿನವನೂ, ಕಿವಿಯಲ್ಲಿ ಸರ್ಪಕುಂಡಲದಿಂದ ಭೂಷಿತನಾದವನೂ, ಪಾದಯುಗಳದಲ್ಲಿ ನೂಪುರವಿರುವವನೂ, ಜಟಾಧಾರಿಯೂ, ದಾರಿದ್ರ್ಯ ದುಃಖವನ್ನು ನಾಶ ಮಾಡುವವನೂ ಆದ ಶಿವನಿಗೆ ನಮಸ್ಕಾರ.

ಭಾನುಪ್ರಿಯಾಯ ದುರಿತಾರ್ಣವತಾರಣಾಯ
ಕಾಲಾಂತಕಾಯ ಕಮಲಾಸನಪೂಜಿತಾಯ ।
ನೇತ್ರತ್ರಯಾಯ ಶುಭಲಕ್ಷಣಲಕ್ಷಿತಾಯ
ದಾರಿದ್ರ್ಯದುಃಖದಹನಾಯ ನಮಃ ಶಿವಾಯ ॥ ೪ ॥

ಭಾನುಪ್ರಿಯನೂ, ಪಾಪಸಮುದ್ರವನ್ನು ದಾಟಿಸುವವನೂ, ಕಾಲಾಂತಕನೂ, ಬ್ರಹ್ಮನಿಗೆ ಪೂಜ್ಯನೂ, ಮುಕ್ಕಣ್ಣನೂ, ಶುಭಲಕ್ಷಣದಿಂದ ತೋರುವವನೂ, ದಾರಿದ್ರ್ಯ ದುಃಖವನ್ನು ದಹನಮಾಡುವವನೂ ಆದ ಶಿವನಿಗೆ ನಮಸ್ಕಾರ.